ಓ ಎಸ್ ನಂ. 512/2019
ಪಿಡಬ್ಲ್ಯೂಃ 02

ದಿನಾಂಕಃ 07.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ

ನಾನು ರಾಜಾಪೂರದ ಖಾಯಂ ನಿವಾಸಿ ಎಂದರೆ ಸರಿ. ನನಗೆ ರಾಜಾಪೂರದ ಗ್ರಾಮದಲ್ಲಿ ಜಮೀನುಗಳು ಇವೆ ಎಂದರೆ ಸರಿ. ನಾನು ತೋಟದಲ್ಲಿ ವಾಸವಿದ್ದೇನೆ. ರಾಜಾಪೂರದಲ್ಲಿರುವ ಜಮೀನಿನ ಸರ್ವೇ ನಂ.108 ಆಗಿರುತ್ತದೆ. ಈ ದಾವೆ ಸರ್ವೇ ನಂ.20/1 ರ ಜಮೀನಿಗೆ ಸಂಭಂದಪಟ್ಟಿರುತ್ತದೆ. ಇದು ದುರುದುಂಡಿಯ ವ್ಯಾಪ್ತಿಯಲ್ಲಿರುತ್ತದೆ ಎಂದರೆ ಸರಿ. ಸದರಿ ಜಮೀನಿನಿಂದ ನೀವು ವಾಸವಿರುವ ತೋಟಕ್ಕೆ ಒಂದುವರೆ ಕಿ.ಮೀ ಗಳ ಅಂತರವಿರುತ್ತದೆ ಎಂದರೆ ಸಾಕ್ಷಿ ಇಲ್ಲ 300 ಅಡಿಗಳ ಅಂತರದಲ್ಲಿರುವತ್ತದೆ. ವಾದಿ ಮತ್ತು ಪ್ರತಿವಾದಿಗಳ ಜಮೀನುಗಳ ಉತಾರವನ್ನು ನಾನು ನೋಡುವ ಪ್ರಸಂಗ ಬಂದಿರುತ್ತದೆ. 2017 ರಲ್ಲಿ ನಾನು ನೋಡಿರುತ್ತೇನೆ. 2017 ರಲ್ಲಿ ಸುಬಾಸ ಗುಂಡಪ್ಪಗೋಳರವರ ಹೆಸರು ಉತಾರದಲ್ಲಿತ್ತು ಎಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ, ಹೆಬ್ಬೆಟ್ಟು ಹಾಕುತ್ತೇನೆ. ಈಗ 1 ಎಕರೆ 16 ಗುಂಟೆ ಉತಾರದಲ್ಲಿ ಸುಬಾಸ ಗುಂಡಪ್ಪಗೋಳರವರ ವಾರಸುದಾರರ ಹೆಸರುಗಳು ಇವೆ ಎಂದರೆ ಸಾಕ್ಷಿ ಅವರು ಅದನ್ನು ಸೃಷ್ಟಿ ಮಾಡಿದ್ದಾರೆ ಎನ್ನುತ್ತಾರೆ. ಅವರು ಅದನ್ನು ಯಾವಾಗ ಸೃಷ್ಟಿ ಮಾಡಿಕೊಂಡಿದ್ದಾರೆಂದು ಗೊತ್ತಿಲ್ಲ, ವಾದಿಗೆ 2017 ರಲ್ಲಿ ಗೊತ್ತಾಗಿದ್ದು, ಅವರು ಬಂದು ನನಗ ಹೇಳಿರುತ್ತಾರೆ.

2. ವಾದಿ ಮತ್ತು ಅವರ ಅಣ್ಣತಮ್ಮಂದಿರ ನಡುವೆ ವಿಬಾಗವಾಗಿ ಬಹಳ ದಿನಗಳು ಆಗಿರುತ್ತವೆ, ದಿನಾಂಕ ಗೊತ್ತಿಲ್ಲ. ಯಾರು ಯಾರಿಗೆ ಎಷ್ಟು ಎಷ್ಟು ಪಾಲು ಬಂದಿದೆ ಎಂದರೆ ಸಾಕ್ಷಿ ವಾದಿಗೆ 1 ಎಕರೆ 16 ಗುಂಟೆ ಪಾಲು ಬಂತು, ಉಳಿದವರಿಗೆ ಎಷ್ಟು ಪಾಲು ಬಂದಿದೆ ಎಂದರೆ ಸಾಕ್ಷಿ ಅವರಿಗೆ ಹೆಚ್ಚು ಕಡಿಮೆ 3 ಎಕರೆ, 4 ಎಕರೆ ಬಂದಿದೆ ಎನ್ನುತ್ತಾರೆ. ವಾದಿಗೆ ಬಂದಿರುವ 1 ಎಕರೆ 16 ಗುಂಟೆ ಒಂದೇ ಕಡೆಯಿಲ್ಲ ಬೇರೆ ಬೇರೆ ಕಡೆ ಇದೆ. ಒಂದು ಪಟ್ಟಿ ಬಿಟ್ಟು ಒಂದು ಪಟ್ಟಿಗೆ ಇದೆ ಎಂದರೆ ಸರಿ. ಯಾವ ಚೆಕ್ ಬಂದಿಯಲ್ಲಿ ವಾದಿಗೆ ಪಾಲು ಬಂದಿದೆ ಎಂದು ನನಗೆ ಗೊತ್ತಿದೆ. ಮೊದಲನೇಯ

ಪಟ್ಟಿಯ ಪೂರ್ವಕ್ಕೆ ಲಕ್ಷ್ಮಣ ಸಿದ್ರಾಮಗೌಡ, ಪಶ್ಚಿಮ, ಉತ್ತರ ಮತ್ತು ದಕ್ಷಿಣಕ್ಕೆ ಬಸಪ್ಪ ಕೇದಾರಿ ಗುಂಡಪ್ಪಗೋಳರವರ ಜಮೀನುಗಳು ಇರುತ್ತವೆ. ಈಗ ಹೇಳಿದ ಚೆಕ್ ಬಂದಿಯಲ್ಲಿ ಎಷ್ಟು ಗುಂಟೆ ಇದೆಎಂದು ನನಗೆ ಗೊತ್ತಿಲ್ಲ. ವಾದಿಗೆ 3 ಪಟ್ಟಿಗಳಲ್ಲಿ ಪಾಲು ಬಂದಿರುತ್ತದೆ. ಅವು ಎಷ್ಟೆಷ್ಟು ಗುಂಟೆಗಳು ಇವೆ ಎಂದು ಹೇಳಲಾಗುತ್ತದಾ ಎಂದರೆ ಸಾಕ್ಷಿ ಎಷ್ಟು ಗುಂಟೆ ಎಂದು ಹೇಗೆ ಹೇಳಲಿ ಎನ್ನುತ್ತಾರೆ. ವಾದಿಯ ಜೊತೆಯಲ್ಲಿ ನಾನು ಇವತ್ತು ರಿನಿಂದ ಬಂದಿದ್ದೇನೆ ಎಂದರೆ ಸರಿಯಲ್ಲ, ನಾನೇ ಬಂದಿದ್ದೇನೆ.

3. ವಾದಿ ಸುಭಾಸ ಗುಂಡಪ್ಪಗೋಳರವರ ಮೇಲೆ ವಿಶ್ವಾಸ ಇಟ್ಟಿದ್ದರು ಎಂದು ನನಗೆ 10-15 ವರ್ಷಗಳ ಹಿಂದೆ ಗೊತ್ತಾಯಿತು. ಸುಭಾಸ ಕಡೆ ಹೇಗೆ ಈ ರೀತಿ ಮಾಡಿದ್ದೀರಿ ಎಂದು ಕೇಳಲು ನಾನು ಮತ್ತು ವಾದಿ ಹೋಗಿರಲಿಲ್ಲ ನನ್ನ ತಂದೆ ಹೋಗಿದ್ದರು. ಈ ಸಾಕ್ಷ್ಯ ಹೇಳುವ ಬಗ್ಗೆ ನನ್ನ ತಂದೆಯ ಬಳಿ ನಾನು ಮಾತುಕತೆ ಮಾಡಿಲ್ಲ. ಈ ದಾವೆ ಹಾಗೂ ಸ್ವತ್ತಿನ ಬಗ್ಗೆ ನನಗೆ ವ್ಯಯಕ್ತಿಕವಾಗಿ ಮಾಹಿತಿಯಿಲ್ಲ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಎಕರೆ 16 ಗುಂಟೆ ಸುಭಾಸ ಇರುವಾಗಲೇ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸುಭಾಸರವರು ಜೀವಂತವಿರುವವರೆಗೂ ಅವರೇ ಸ್ವಾ ಧೀನದಲ್ಲಿದ್ದರು ಎಂದರೆ ಸರಿಯಲ್ಲ. ಅವರು ಮೃತಪಟ್ಟ ನಂತರ ಅವರ ಹೆಂಡತಿ ಮಕ್ಕಳು ಹೆಸರನ್ನು ದಾಖಲೆಗಳಲ್ಲಿ ದಾಖಲಿಸಿಕೊಂಡು ದಾವಾ ಸ್ವತ್ತಿನ ಕಬ್ಜೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಮಾತನ್ನು ಕೇಳಿಕೊಂಡು ನಾನು ನನ್ನ ಪ್ರಮಾಣಪತ್ರದಲ್ಲಿರುವ ವಿಚಾರಗಳನ್ನು ಸುಳ್ಳಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಮನೆಯಿಂದ 1 ವರೆ ಕಿ ಮಿ ದೂರವಿದ್ದು, ಅದರ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸುಳ್ಳಾಗಿದ್ದು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರುವಿಚಾರಣೆ</u>: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ